KEDIUM Ply & boards
www.kedium.in
LIFE TIME WARRANTY
PLYWOOD | BLOCK BOARDS | FLUSH DOORS | VENEERS

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶನಿವಾರ, ಜುಲೈ 15, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00

CENTRAL LIBRARY
Stay Water ... for
NOW W...
Call us at 8884-2...

# ಗುಣಮಟ್ಟದ ಶಿಕ್ಷಣಕ್ಕೆ ಸಹ್ಯಾದ್ರಿ ಕಾಲೇಜ್

ಮಂಗಳೂರು, ಜು. 14: ಗುಣಮಟ್ಟದ ತಾಂತ್ರಿಕ ಶಿಕ್ಷಣ ನೀಡುವ ಉದ್ದೇಶದಿಂದ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಸಂಯೋಜನೆ, ಕರ್ನಾಟಕ ಸರಕಾರ ಮತ್ತು ಹೊಸದಿಲ್ಲಿಯ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅನುಮೋದನೆಯೊಂದಿಗೆ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಅಸ್ತಿತ್ವಕ್ಕೆ ಬಂದಿದೆ. ಕೇಂದ್ರ ಮಾನವ ಸಂಪದ ಅಭಿವೃದ್ಧಿ ಇಲಾಖೆಗಳಿಂದ ಮಾನ್ಯತೆ ಪಡೆದಿದ್ದು, ಐಎಬಿ ಹಾಗೂ ಐಎಸ್ ಒಗಳಿಂದ ಸರ್ಟಿಫಿಕೇಟ್ ಕೂಡ ಪಡೆದಿದೆ. ರಾಷ್ಟ್ರೀಯ ಮೌಲ್ಯಮಾಪನ ಹಾಗೂ ಮಾನ್ಯತಾ ಮಂಡಳಿ (ನ್ಯಾಕ್) 'ಎ' ಗ್ರೇಡ್ ಮಾನ್ಯತೆ ನೀಡಿದೆ.

ಕಾಲೇಜು ಪ್ರತಿವರ್ಷವೂ ಅತ್ಯುತ್ತಮ ಫಲಿತಾಂಶ ದಾಖಲಿಸುವ ಮೂಲಕ ಸಾಧನೆ ಮೆರೆಯುತ್ತಾ ಮುಂದುವರಿಯುತ್ತಿದೆ. ಬೋಧನಾ ವಿಧಾನದಲ್ಲಿ ಹೊಸತನದ ತಾಂತ್ರಿಕತೆ ಅಳವಡಿಸಿಕೊಳ್ಳುತ್ತಿದೆ.

ಎಂಜಿನಿಯರಿಂಗ್ ಪದವಿಯಲ್ಲಿ 5 ವಿಭಾಗಗಳಿದ್ದು ಸಿವಿಲ್ ಎಂಜಿನಿಯರಿಂಗ್, ಮೆಕ್ಯಾನಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಕಮ್ಯುನಿಕೇಷನ್ ಎಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಮತ್ತು ಇನ್‌ಫಾರ್ಮೇಶನ್ ಸೈನ್ಸ್ ಎಂಜಿನಿಯರಿಂಗ್ ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಎಂಬಿಎ, ಎಂಟೆಕ್ ಕೋರ್ಸ್‌ಗಳನ್ನು ಹೊಂದಿದೆ. ಮೈಕ್ರೋಸಾಫ್ಟ್, ಇಂಟೆಲ್, ಇನ್ಫೋಸಿಸ್, ಐಐಐಟಿ-ಎ



ಮುಂತಾದ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು ಇದು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಸಹಕಾರಿಯಾಗಿದೆ.

ಕಾಲೇಜು ಅತ್ಯಾಧುನಿಕ ಸೌಲಭ್ಯ, ಸಂಶೋಧನಾ ಕೇಂದ್ರ, ಇನ್‌ಕ್ಯುಬೇಷನ್ ಸೆಂಟರ್, ಉದ್ಯೋಗ ಮತ್ತು ತರಬೇತಿ ಕೇಂದ್ರ, ಸಹ್ಯಾದ್ರಿ ಸಾಮಾಜಿಕ ಸಂಶೋಧನಾ ಕೇಂದ್ರ, ಹ್ಯಾಂಡ್ಸ್ ಆನ್ ಎಕ್ಸ್‌ಪೀರಿಯೆನ್ಸ್ ಲ್ಯಾಬ್, ಜೀವ ವಿಜ್ಞಾನ ಪ್ರಯೋಗಾಲಯ, ಸಂಶೋಧನಾ ಕೇಂದ್ರ, ಉತ್ಪನ್ನಗಳ ವಿನ್ಯಾಸ ಕೇಂದ್ರಗಳನ್ನು ಸ್ಥಾಪಿಸಿದ್ದು ಉದ್ಯಮಶೀಲತೆಗೆ ಸರಿಯಾದ ದಾರಿ ಕಲ್ಪಿಸಿಕೊಟ್ಟಿದೆ.

ಕಾಲೇಜಿನ ನಿರ್ಮಾತೃ ಮಂಜುನಾಥ ಭಂಡಾರಿ ಅವರು ಶಿಕ್ಷಣಕ್ಕಷ್ಟೇ ಅಲ್ಲ ಉದ್ಯಮಕ್ಕೂ ಆದ್ಯತೆ ನೀಡಿದ್ದಾರೆ. ಅದರ ಫಲವಾಗಿಯೇ ಅನೇಕ ಯೋಜನೆಗಳು ಇಲ್ಲಿವೆ.

## ಸಹ್ಯಾದ್ರಿ ಪ್ರಾಜೆಕ್ಟ್ ಸಪೋರ್ಟ್ ಸ್ಕಿಂ

ಸಹ್ಯಾದ್ರಿ ಪ್ರಾಜೆಕ್ಟ್ ಸಪೋರ್ಟ್ ಸ್ಕಿಂ (ಎಸ್‌ಪಿಎಸ್‌ಎಸ್) ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರೋತ್ಸಾಹಿಸುವಂತಹ ಒಂದು ಯೋಜನೆ. ವಿದ್ಯಾರ್ಥಿಗಳು ಒಂದು ಪ್ರಾಜೆಕ್ಟ್ ತಯಾರಿಸಿದರೆ ಆ ವಿದ್ಯಾರ್ಥಿಗಳಿಗೆ ಆರ್ಥಿಕ ಹಾಗೂ ಶೈಕ್ಷಣಿಕ ಬೆಂಬಲ ನೀಡುವುದು ಇದರ ಮುಖ್ಯ ಉದ್ದೇಶ. ಪ್ರತಿ ವರ್ಷ ಒಂದು ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ದತ್ತಿ ನೀಡುತ್ತಿದ್ದಾರೆ. ಪ್ರಥಮ ವರ್ಷದವರಿಗೆ 10 ಸಾವಿರ, ದ್ವಿತೀಯ ವರ್ಷದವರಿಗೆ 20 ಸಾವಿರ, ತೃತೀಯ ವರ್ಷದವರಿಗೆ 30 ಸಾವಿರ, ನಾಲ್ಕನೇ ವರ್ಷದವರಿಗೆ 40 ಸಾವಿರ ಹಾಗೂ 5ನೇ ವರ್ಷದ ವಿದ್ಯಾರ್ಥಿಗಳಿಗೆ ಪ್ರಾಜೆಕ್ಟ್ ತಯಾರಿಸಲು 50 ಸಾವಿರ ರೂಪಾಯಿ ನೀಡಲಾಗುತ್ತಿದೆ.

## ಡಿ.ಟಿ. ಲ್ಯಾಬ್ಸ್ ಪ್ರೈ. ಲಿಮಿಟೆಡ್

ಸಹ್ಯಾದ್ರಿ ಎಜುಡ್ರೀಮರ್ಸ್ ಲ್ಯಾಬ್ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳ ಕನಸನ್ನು ಸಾಕಾರಗೊಳಿಸಲು ಇರುವ ಒಂದು ಪ್ರಯೋಗಾಲಯವಾಗಿದ್ದು ಇದು ವಿದ್ಯಾರ್ಥಿಗಳಿಗೆ ಬೇಕಾದ ಸಂಪದವನ್ನು ಒದಗಿಸುವುದರ ಜತೆಗೆ ಯುವ ಮನಸ್ಸುಗಳಿಗೆ ಸಂದೇಹ ಮತ್ತು ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ.

## ಆರ್.ಡಿ.ಎಲ್ ಟೆಕ್ನಾಲಜೀಸ್

ಇದು 15 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಎಟಿಎಂಎಲ್, ಎಟಿಮೆಗಾ, ಪಿಸಿ, ಎ.ಆರ್.ಎಂ, ಎಂಎಸ್‌ಪಿ430 ಹಾಗೂ ರೊಬೊಟಿಕ್ಸ್ ಸೇರಿದಂತೆ ಇತರ ಎಂಬೆಡೆಡ್ ಸಿಸ್ಟಂ ಅಭಿವೃದ್ಧಿಪಡಿಸುತ್ತಿದೆ.

## ಹ್ಯಾಂಡ್ಸ್ ಆನ್ ಎಕ್ಸ್‌ಪೀರಿಯೆನ್ಸ್ ಲ್ಯಾಬ್

ಈ ಪ್ರಯೋಗಾಲಯ ಸಿದ್ಧಾಂತ ಮತ್ತು ತಂತ್ರಜ್ಞಾನಗಳ ನಡುವೆ ಸೇತುವೆಯಂತೆ ಕೆಲಸ ಮಾಡಲಿದೆ. ವಿದ್ಯಾರ್ಥಿಗಳ ವಿಶ್ಲೇಷಣಾ ಕೌಶಲ ಮತ್ತು ಪ್ರಾಯೋಗಿಕ ಜ್ಞಾನವನ್ನು ಹೆಚ್ಚಿಸುವ ಮೂಲಕ ಉದಯೋನ್ಮುಖ ಪ್ರತಿಭೆಗಳನ್ನು ಸೃಷ್ಟಿಸುವಲ್ಲಿ ನೆರವಾಗಿದೆ. ಇದು ಮನೆಯಲ್ಲಿ ಉದ್ಭವಿಸುವ ಕೆಲವು ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಸಂಶೋಧನೆಗೆ ನೆರವಾಗುತ್ತವೆ.

## ಎಂಟರ್‌ಪ್ರೀನರ್‌ಶಿಪ್ ಸೆಲ್ ಸಹ್ಯಾದ್ರಿ

ಅಭ್ಯಾಸದೊಂದಿಗೆ ಸಿದ್ಧಾಂತವನ್ನು ಸಂಯೋಜಿಸುವ ಘಟಕ ಇದಾಗಿದ್ದು, ಸಿದ್ಧಾಂತಗಳು, ಮಾದರಿ, ತಂತ್ರಜ್ಞಾನವನ್ನು ಪರೀಕ್ಷಿಸಲು ಅವಕಾಶವನ್ನು ಈ ಘಟಕ ಒದಗಿಸಲಿದೆ.

ಈ ಘಟಕವು ನೈಜ ವ್ಯವಹಾರದ ಯೋಜನೆ ರಚಿಸುವುದು, ಇತರೆ ಕ್ಷೇತ್ರಗಳ ಪ್ರಾಜೆಕ್ಟ್‌ಗಳ ರಚನೆ, ವ್ಯಾವಹಾರಿಕ ಸಮುದಾಯದಲ್ಲಿ ನಾಯಕರ ಒಳನೋಟಗಳ ಲಾಭ ಪಡೆಯುವುದು ಇದರ ಉದ್ದೇಶದಿಂದ ಕೆಲಸ ಮಾಡುತ್ತಿದೆ.